ಹಿಡಿಯಲೇಬೇಕು' ಇನ್ಸ್‌ಪೆಕ್ಟರ್ ರಾಜಧಾನಿ ಪಿಸಿಯನ್ನು ಅವಸರಿಸಿದ.

ಪಲ್ಸರ್ ಸ್ಟಾರ್ಟ್ ಆಗುವ ಮೊದಲೇ ರಸ್ತೆಯಲ್ಲಿ ಕಾರು ಬೆಳಕು ಮೂಡಿಸುತ್ತಾ ಮಿಂಚಿನ ವೇಗದಲ್ಲಿ ಸಾಗುತ್ತಿತ್ತು.

* * *

ಮಿಂಚಿನ ವೇಗದಲ್ಲಿ ಸಾಗಿದ ಕಾರು ಮುಖ್ಯ ರಸ್ತೆಯನ್ನು ಬಿಟ್ಟು ಹೆದ್ದಾರಿಯನ್ನು ಹಿಡಿದು ಸ್ವಲ್ಪ ವೇಗ ತಗ್ಗಿಸಿಕೊಂಡಿತು. ಅಲ್ಲಿಯವರೆಗೂ ಉಸಿರು ಬಿಗಿ ಹಿಡಿದು ಆಕ್ಸಿಲೇಟರ್ ಮೇಲೆ ಕಾಲು ಒತ್ತಿದ್ದ ಪಾಂಬು ನಿಟ್ಟುಸಿರಿಟ್ಟು ಪಕ್ಕದಲ್ಲಿ ಕುಳಿತವನತ್ತ ದಿಟ್ಟಿಸಿದ. ಪಕ್ಕದಲ್ಲಿ ಕುಳಿತವನ ದೃಷ್ಟಿ ರಸ್ತೆಯ ಮೇಲೆ ದೂರಕ್ಕೂ ಬಿದ್ದ ಹೆಡ್‌ಲೈಟ್‌ನ ಡಿಪ್ ಬೆಳಕಿನತ್ತಲೇ ಇತ್ತು. ಹತ್ತಿರ ಕುಳಿತವನಿಗೆ ತನ್ನ ಮೇಲೆ ಸಿಟ್ಟು ಬಂದಿದೆಯೆನ್ನುವುದು ಅವನಿಗೆ ಗೊತ್ತು. ಅದಕ್ಕಾಗಿಯೇ ಮತ್ತೆ ರಸ್ತೆಯತ್ತ ನೋಟ ಹರಿಸಿ ಆಕ್ಸಿಲೇಟರ್ ತುಳಿದ.

'ನೀನು ಉದ್ದೇಶಪೂರ್ವಕವಾಗಿ ಹೂಡಿರೋ ನಾಟಕ ಇದು' ಶಾಂತವಾಗಿ ಹೇಳಿದ ಪಕ್ಕದಲ್ಲಿ ಕುಳಿತಿದ್ದವ. ಪಾಂಬುವನ್ನು ಚುಚ್ಚಿದಂತಿತ್ತು ಆ ಮಾತುಗಳು.

'ಅಂದ್ರೆ, ನಾನು ನಿನ್ನನ್ನು ಆ ಪೊಲೀಸ್ ಇನ್ಸ್‌ಪೆಕ್ಟರ್ ಗೆ ಒಪ್ಪಿಸ್ತೀನಿ ಅಂತ ತಿಳ್ಕೊಂಡಿಯಾ ಹೇಗೆ?'

'ಅಲ್ಲದೆ ಮತ್ತೇನಿನ್ನು?' ಅಸಮಾಧಾನವಿತ್ತು ಪಕ್ಕದಲ್ಲಿ ಕುಳಿತವನಲ್ಲಿ.

'ಹಿತೇಶ, ನನ್ನ ಮೇಲೆ ನಿನಗೆ ನಂಬಿಕೆ ಬರೋವರ್ಗೂ ನೀನು ನನ್ನ ಅಪಾರ್ಥನೇ ಮಾಡಿಕೊಳ್ತಿ' ಕಾರಿನ ವೇಗ ತಗ್ಗಿಸಿ ಪಕ್ಕದಲ್ಲಿ ಕುಳಿತವನನ್ನು ಸಾಂತ್ವನಿಸಿದ.

ಹತ್ತಿರ ಕುಳಿತವನ ಮುಖದಲ್ಲಿ ಇನ್ನೂ ಸಮಾಧಾನವಿದ್ದಂತಿಲ್ಲ. ಹಿತ್ಶೈಷಿ ಅಂದುಕೊಂಡವನ ಮೇಲೆ ಆ ಭಾವನೆ ಬರಲಾರದು. ಸಂಶಯದ ದೃಷ್ಟಿ ಅವನತ್ತವಿತ್ತು.

'ನಿನ್ನ ನಂಬೋದು ಹೇಗೆ? ಸುಮ್ನೆ ನನ್ನನ್ನು `ಬಂಡೆ'ಗೆ ಬರುವಂತೆ ಹೇಳಿ ನೀನು ಪೊಲೀಸರನ್ನು ಕರೆಸಿದ್ದೀಯಾಂದ್ರೆ, ನಿನ್ನ ಉದ್ದೇಶ ಬೇರೆ ಏನೋ ಇತ್ತು. ನನ್ನ ಕಣ್ಣಿಗಿಂತಲೂ ಮೂಗು ಸೂಕ್ಷ್ಮ. ಪೊಲೀಸ್ನೋರ ವಾಸನೆ ಕೂಡಲೇ ಹತ್ತಿಕೊಂಡ್ತು. ನೀನು ನನ್ನ ಅಷ್ಟು ಪಕ್ಕನೆ ಏಮಾರಿಸೋದಿಕ್ಕೆ ಸಾಧ್ಯವಿಲ್ಲ ಪಾಂಬು. ನಿನ್ನನ್ನು ನಾನು ನಂಬೋದು ಒಂದೇ ವಿಷಯದಲ್ಲಿ. ಅದೂ ಲಹರಿಯ ಬಗ್ಗೆ ತಿಳಿಸ್ತೀಯಾಂತ ಮಾತ್ರ' ಅಸಹನೆ, ಸಿಟ್ಟು ಎಲ್ಲವೂ ಒಮ್ಮೆಲೆ ಹೊರ ಹೊಮ್ಮಿತು.

'ಹಿತೇಶ, ಸಮಾಧಾನ ಮಾಡ್ಕೊ. ನಿನ್ನನ್ನು ಪೊಲೀಸರಿಗೆ ಹಿಡಿದುಕೊಡೋ ಉದ್ದೇಶ ನನಗಿಲ್ಲ. ನಾನು ಹೇಳೋ ಮಾತು ಕೇಳು' ಮೆಲ್ಲಗೆ ಅವನ ಭುಜದ ಮೇಲೆ ಕೈಯಿಕ್ಕಿದ. ಹಿತೇಶನ ನೋಟ ಪಾಂಬುವಿನ ಕಡೆಗಿತ್ತು.

'ಹಾಗಾದರೆ ನನ್ನನ್ನು ಬಂಡೆಗೆ ಬರೋದಿಕ್ಕೆ ಯಾಕೆ ಹೇಳ್ದೆ'

'ಲಹರಿಯ ವಿಷಯ ಮಾತಾಡೋದಿಕ್ಕೆ. ಅಲ್ಲಿಗೆ ಕಾಕುಟ್ಟ ಬರಲಾರನೆನ್ನುವ ಉದ್ದೇಶದಿಂದ ನಿನ್ನನ್ನು ಬರೋದಿಕ್ಕೆ ಹೇಳಿದೆ. ಅದೇ ಸಮಯಕ್ಕೆ ಪೊಲೀಸ್ನೋರ ಆಗಮನ ಕಾಕತಾಳೀಯವಷ್ಟೇ'

'ಪೊಲೀಸರನ್ನು ಕಂಡು ನೀನು ನನ್ನನ್ನು ಒಳಗೆ ಬಿಟ್ಟು ಹಿಂಬದಿಯಿಂದ ಓಡಿ ಹೋಗೋದಿಕ್ಕೆ ಕಾರಣವೇನು?'

ಪಾಂಬುವಿನ ಮುಖ ಕಂತಿತು. ತಪ್ಪಿತಸ್ಥ ಭಾವನೆ ತುಂಬಿತ್ತು.

'ಅವರಿಗೆ ನನ್ನ ಪರಿಚಯವಿತ್ತು. ಅದಲ್ಲದೆ, ನಾನೇನಾದರೂ ಅಲ್ಲಿದ್ರೆ ನಿನ್ನ ವಿಷಯವನ್ನು ಕೆದಕ್ತಾ ಇದ್ರು. ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ನಾನು ಅಲ್ಲಿಂದ ಹಿಂಬದಿಯ ಹಾದಿ ಹಿಡಿದು ಓಡಿದೆ. ಆದ್ರೂ ಆ ಚಾಲಾಕಿ ಇನ್ಸ್‌ಪೆಕ್ಟರ್ ನನ್ನ ಗುರುತಿಸ್ದ, ಮಾತ್ರವಲ್ಲ ಕಾರಣಾನೂ ಕೇಳ್ದ'

'ನೀನು ಹೇಳ್ಬಿಟ್ಟೆ?' ಆತಂಕದ ದನಿಯಿಂದ ಕೇಳಿದ ಹಿತೇಶ.

'ಇಲ್ಲ, ಅಂತಹ ದ್ರೋಹಿ ನಾನಲ್ಲ. ಇನ್ಸ್‌ಪೆಕ್ಟರ್ ನಿನ್ನ ಬಗ್ಗೆ ಕೇಳ್ತಾನೇನೋ ಅನ್ನುವ ಉದ್ದೇಶದಿಂದ ಅವನ ಹಿಂದೆ ಹೋದದ್ದಲ್ಲ. ನಿನ್ನನ್ನು ಕಾರಿನಲ್ಲಿ ಕುಳ್ಳಿರಿಸಿ ನಾನು ಅವನ ಜೊತೆಗೆ ಹೋದ ಉದ್ದೇಶ ಬೇರೆ ಇದೆ'

ಹಿತೇಶನದ್ದು ಸಂಶಯದ ನೋಟ.

'ಮತ್ತೆ?' ಚುಟುಕಿನ ಪ್ರಶ್ನೆ ಬಂತು.

'ಅದನ್ನ ಇನ್ನೊಮ್ಮೆ ಯಾವತ್ತಾದ್ರೂ ಹೇಳ್ತೀನಿ' ಅವನ ಮೇಲೆ ಭರವಸೆಯಿಲ್ಲದ ಹಿತೇಶ, ಪಾಂಬುವಿನ ಮೈ ಮುಟ್ಟಿದ.

'ಪಾಂಬು, ಗಾಡಿ ಪಕ್ಕಕ್ಕೆ ನಿಲ್ಸು' ಹಿತೇಶನ ದೃಷ್ಟಿ ಹಿಂದಕ್ಕೆ ಹೊರಳಿತು. ಯಾವುದೇ ವಾಹನ ಕಾರನ್ನು ಹಿಂಬಾಲಿಸಿಕೊಂಡು ಬರುವುದಿಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡ.

ಪಾಂಬು ಕಾರನ್ನು ನಿಧಾನವಾಗಿ ಟಾರು ರಸ್ತೆಯಿಂದ ಮಣ್ಣಿನ ರಸ್ತೆಗೆ ಇಳಿಸಿದ. ಎದುರಿಗೆ ಪಂಜಾಬಿ ದಾಬದತ್ತ ನೋಡಿದ.

'ಇಳಿ, ಹೊಟ್ಟೆಗೆ ಏನಾದರೂ ಇಳಿಸೋಣ'

'ಅದಕ್ಕಿಂತಲೂ ಮೊದಲು ನನ್ನ ಪ್ರಶ್ನೆಗೆ ಉತ್ತರಿಸು' ಕಾರಿನ ಬಾಗಿಲು ತೆರೆಯಲು ಕೈ ಹಾಕಿದವನನ್ನು ತಡೆದ ಹಿತೇಶ. ಕೈ ಹಾಗೆ ಸ್ಟೇರಿಂಗ್ ಚಕ್ರದ ಮೇಲೆ ಇಳಿಯಿತು.

'ಯಾವ ಪ್ರಶ್ನೆ?'ಗಂಭೀರವಾಗಿತ್ತು ಅವನ ಮುಖ.

'ನೀನು ಇನ್ಸ್‌ಪೆಕ್ಟರ್ ಜೊತೆಗೆ ಮಾತಾಡಲು ಸಮುದ್ರದ ಕಡೆಗೆ ನಡೆದೆ. ಆ ಸಮಯದಲ್ಲಿ ಪೊಲೀಸ್ ಪೇದೆಯೊಬ್ಬ ಕಾರಿನತ್ತ ಬಂದಿದ್ದ. ನೀನು ಇಲಾಖೆಗೆ ನನ್ನ ವಿಷಯ ತಿಳಿಸಿಲ್ಲಾಂತ ಅಂದುಕೊಂಡಿದ್ದೀನಿ. ಸರಿಯಾ?'

ಪಾಂಬುವಿನ ಮುಖ ಹುಳ್ಳಗಾಯಿತು. ಮುಖ ಗಂಭೀರವಾಗಿರುವಂತೆ ಬಿಗಿದು ಹಿಡಿದ.

'ನಿನಗೆ ನನ್ನ ಮೇಲೆ ಇನ್ನೂ ಸಂದೇಹ. ಯಾವ ಇಲಾಖೆಗೂ ನಾನು ನಿನ್ನ ಬಗ್ಗೆ ಹೇಳಿಲ್ಲ. ನನ್ನ ಮಾತು ನಂಬು'

'ನಿನ್ನನ್ನು ಸದ್ಯ ನಂಬಲೇಬೇಕು. ಇಲ್ಲಾಂದ್ರೆ ಶೆಲ್ಲಿ ವಿಷಯ ಬಯಲಾಗುತ್ತೆ' ಹಿತೇಶ ಚಕ್ರ ಹಿಡಿದ ಕೈಗಳನ್ನು ನೋಡಿದ. ಮೆಲ್ಲಗೆ ಕಂಪಿಸಿದ ಪಾಂಬು.

ದಾಬಾದತ್ತ ಹೋಗುವ ಮನಸ್ಸು ಮುದುರಿತು. ಹಾಗೇ ಸೀಟಿಗೆ ಅಂಟಿಕೊಂಡಂತೆ ಕುಳಿತ. ಹಿತೇಶನ ಮುಖದಲ್ಲಿ ಸಣ್ಣ ನಗು ಸುಳಿಯಿತು.

'ನಡಿ, ಏನಾದರೂ ತಿನ್ನೋಣ'

ಪಾಂಬು ತಲೆ ಕೊಡವಿಕೊಂಡು ಕೆಳಗಿಳಿದು ಹಿತೇಶನನ್ನು ಹಿಂಬಾಲಿಸಿದ.

ದಾಬಾದಲ್ಲಿ ಅಷ್ಟೊಂದು ಜನರಿರಲಿಲ್ಲ. ಗಾಳಿಗೆ ಮೈಯೊಡ್ಡಿ ಕುಳಿತುಕೊಳ್ಳಲು ಹೊರಗಿನ ಟೇಬಲನ್ನು ಆರಿಸಿ ಕುಳಿತ ಇಬ್ಬರಲ್ಲೂ ಮಾತಿಲ್ಲ. ಬೇರರ್‌ನನ್ನು ಕಾಯುತ್ತಿದ್ದವರ ಎದುರಿಗೆ ಅಪರಿಚಿತ ವ್ಯಕ್ತಿ ಬಂದು ನಿಂತ.

ಪಾಂಬು ಮೆಲ್ಲಗೆ ಹಿತೇಶನ ಕೈಯನ್ನು ಒತ್ತಿದ.

* * *

ಎದುರು ಬಂದು ನಿಂತ ಬಲಾಢ್ಯ ವ್ಯಕ್ತಿ ಹಿತೇಶನನ್ನೇ ದಿಟ್ಟಿಸಿದ. ಪಾಂಬುವಿನ ಎಚ್ಚರಿಕೆಯ ಸಂಜ್ಞೆಗೆ ಹಿತೇಶ ಮುಖದಲ್ಲಿ ನಗು ತುಂಬಿಕೊಂಡ. ಬಲಾಢ್ಯ ಹಿತೇಶನ ಹತ್ತಿರ ಬಂದು ನಿಂತು ಮುಗುಳ್ನಗುವಂತೆ ತುಟಿಗಳನ್ನು ಬಿರಿದ.

'ನೀನು ಧರ್ಮ ಸಂಕಟದಲ್ಲಿದ್ದೀಯಾಂತ ಗೊತ್ತಾಯ್ತು. ಪ್ರಭಾಕರ ಮತ್ತು ನಾನೂ ಕೊಚ್ಚಿಯ ಸಮುದ್ರ ತೀರದಲ್ಲಿ ಒಟ್ಟಿಗೆ ಓಡಾಡಿದೋರು. ಅವನನ್ನು ಬೆಸ್ತರ ಕೈಯಿಂದ ಪಾರು ಮಾಡಿದೋನು ನಾನೇ. ನಿನ್ನ ಸಹಾಯಕ್ಕೂ ನಾನಿದ್ದೇನೆ' ಬಲಾಢ್ಯನ ಮಾತುಗಳನ್ನು ಕೇಳಿ ಹಿತೇಶನಿಗೆ ತಲೆ ತಿರುಗಿದಂತಾಯಿತು. ಪಾಂಬು ಸಾಮಾನ್ಯನಲ್ಲ. ಅಲ್ಲಲ್ಲಿ ಅವನ ಸಹವರ್ತಿಗಳನ್ನು ನೇಮಿಸಿದ್ದಾನೆ. ಶೆಲ್ಲಿಯ ವಿಷಯ ಕೆದಕ್ಕಿದ್ದಕ್ಕೆ ಎಚ್ಚರಿಸುವುದಕ್ಕಾಗಿ ಆತ ಇಲ್ಲಿಯವರೆಗೂ ಕರೆದುಕೊಂಡು ಬಂದಿದ್ದಾನೆಯೆ? ಅನುಮಾನ ಕಾಡಿತು. ನಂಬಿಕೆ ದ್ರೋಹಿ. ಹಿತೇಶನ ಹಲ್ಲುಗಳು ತುಟಿಯನ್ನು ಬಿಗಿಯಾಗಿ ಹಿಡಿದುಕೊಂಡವು.

ಬಲಾಢ್ಯನ ಕೈ ಹಿತೇಶನ ಭುಜದ ಮೇಲೆ ಇಳಿದಾಗ ಹೆಗಲ ಮೇಲೆ

## ಮಳೆಯ ಮುದ

ಮಳೆಯು ಬಂದು
ಮನಕೆ ಮುದ,
ಹನಿ ಹನಿ ಸುರಿದು
ನೆಲಕೆ ಹದ!

★ **ದೊಡ್ಡರಂಗೇಗೌಡ**



ಈಶ್ವರ